ಅಧ್ಯಕ್ಷರು : ಮತ್ತೆ ನೀವು ಮಾತನಾಡಿಲ್ಲವೆಂದರೆ ನಾನೇನು ಮಾಡಲಿ?

ಶ್ರೀ ಹೆಚ್.ಸಿ.ಬಾಲಕೃಷ್ಣ : ನನ್ನ ಹೆಸರನ್ನು ಕರೆಯಿರಿ, ಮಾತನಾಡುತ್ತೇನೆ.

ಅಧ್ಯಕ್ಷರು : ಹಾಗಿದ್ದರೆ, ನಿಮ್ಮ ವಿಷಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿಯಲ್ಲಿ ಕಸಾಯಿಖಾನೆ ಬಗ್ಗೆ ಹೇಳಿ.

1) ವಿಷಯ : ಆನೇಕಲ್‌ನ ಇಗ್ಗಲೂರಿನಲ್ಲಿ ಕಸಾಯಿಖಾನೆ ಸ್ಥಾಪನೆ ಮಾಡಬಾರದೆನ್ನುವ ಬಗ್ಗೆ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ) : ಸನ್ಮಾನ್ಯ ಅಧ್ಯಕ್ಷರೆ, ಕಸಾಯಿಖಾನೆ ವಿಚಾರದಲ್ಲಿ ನಮ್ಮ ವಿರೋಧಪಕ್ಷದ ನಾಯಕರ ಕ್ಷೇತ್ರ ಅದು. ಕಸಾಯಿಖಾನೆ ಪ್ರಾರಂಭ ಮಾಡುವುದಕ್ಕೆ ಹಿಂದಿನ ಸರ್ಕಾರ ಹೊರಟಿತ್ತು. ಆನೇಕಲ್‌ನ ಇಗ್ಗಲೂರಿನಲ್ಲಿ 2006ರಲ್ಲಿ.....

ಶ್ರೀ ಸಿದ್ದರಾಮಯ್ಯ : ಇದು ಯಾವ ವಿಚಾರ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದು ಹಾರೋಹಳ್ಳಿಯದ್ದು, zero hourನ ವಿಷಯ,

ಅಧ್ಯಕ್ಷರು : ಇದು ಒಂದಿದೆ, ಪೂರೈಸಿ ಬಿಡಲಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ ಅವಕಾಶ ಕೊಟ್ಟಿದ್ದಾರೆ. ಬೆಳಗ್ಗೆ ಕೇಳಿದಾಗ ಮಧ್ಯಾಹ್ನ ಮಾತನಾಡಿ ಎಂದು ಹೇಳಿದ್ದರು. 2006ರಲ್ಲಿ ಆನೇಕಲ್‌ನ ಇಗ್ಗಲೂರಿನಲ್ಲಿ ಸ್ಥಾಪನೆ ಮಾಡಬೇಕೆಂದು ಹೊರಟಿದ್ದು, ಅದನ್ನು ಈಗ ಹಾರೋಹಳ್ಳಿಗೆ ಸ್ಥಳಾಂತರ ಮಾಡಿದ್ದಾರೆ. ಜಿಲ್ಲಾಡಳಿತವನ್ನು ಕೇಳಿದರೆ ಇಲ್ಲ, ಇಲ್ಲಿ ಮಾಡುವುದಿಲ್ಲ, ಮಾಡಬಾರದೆಂದು ವರದಿ ಕೊಟ್ಟಿದ್ದೇವೆಂದು ಜಿಲ್ಲಾಡಳಿತ ಹೇಳುತ್ತದೆ. ಮತ್ತೊಂದು ಮುಖ್ಯ ಅಂಶವೇನೆಂದರೆ ಇಲ್ಲಿ ಕಸಾಯಿಖಾನೆ ಮಾಡಬಾರದೆಂದು ಆಗ ಕಾಂಗ್ರೆಸ್‌ನವರೇ ಹೋರಾಟ ಮಾಡಿದ್ದರು.

ಅಧ್ಯಕ್ಷರು : ಈಗ ಅದೆಲ್ಲಾ ಬೇಡ. ಹೋರಾಟದ ಪ್ರಶ್ನೆ ಬೇಡ. ಈಗ ಏನಾಗಬೇಕು ಹೇಳಿ. ಏನು ಹೇಳಬೇಕೋ ಅದನ್ನು ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಆಗ ಇವರೇ ಹೋರಾಟ ಮಾಡಿದ್ದರು. ಇಲ್ಲಿ ಕಸಾಯಿಖಾನೆ ಆಗಬಾರದು. ದಯಮಾಡಿ ಅದನ್ನು ಬದಲಾವಣೆ ಮಾಡಿ ಅಲ್ಲಿರುವಂಥ ಪರಿಸರದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಬದಲಾವಣೆ ಮಾಡಿ ಎಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದು ಏನು ವಿಚಾರವೆಂದು ಸರ್ಕಾರ ಅದಕ್ಕೆ

ಸ್ಪಷ್ಟೀಕರಣ ಕೊಡಬೇಕು. ಏಕೆಂದರೆ ಹಿಂದೆ ಕಾಂಗ್ರೆಸ್‌ನವರೇ ಹೋರಾಟ ಮಾಡಿದ್ದರು, ಅಲ್ಲಿ ಕಸಾಯಿಖಾನೆ ಮಾಡಬೇಡಿ ಎಂದು.

ಅಧ್ಯಕ್ಷರು : ಯಾರು ಹೋರಾಟ ಮಾಡಿದ್ದರೋ ಗೊತ್ತಿಲ್ಲ. ಈಗ ಏನು ಆಗಬೇಕೋ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗಲೂ ನಿಮ್ಮ ಸಹಕಾರ ಇರಲಿ ಎಂದು ಹೇಳುತ್ತಿದ್ದೇನೆ. ಯಾರೂ ಏನೂ ಹೇಳುತ್ತಿಲ್ಲವಲ್ಲ ಅಧ್ಯಕ್ಷರೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸರ್ಕಾರದ ಗಮನ ಸೆಳೆದಿದ್ದಾರೆ.

ಅಧ್ಯಕ್ಷರು : ಈಗಾಗಲೇ ಉತ್ತರ ಹೇಳುತ್ತಾರೆ. ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಬಾಲಕೃಷ್ಣ ಕೇಳಪ್ಪ ಇಲ್ಲಿ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದನ್ನು ಆ ಘಳಿಗೆಯಲ್ಲೇ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ನೀವು ಸರ್ಕಾರದ ಗಮನ ಸೆಳೆದಿರುತ್ತೀರಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಸರ್, ಮೊದಲೇ ನಿಮಗೆ ನೋಟಿಸ್ ಕೊಟ್ಟಿರುತ್ತೇವಲ್ಲ?

ಶ್ರೀ ಸಿದ್ದರಾಮಯ್ಯ : ನೀವು ಕೊಟ್ಟಿದ್ದರೂ ಸಹ, ಈಗಲೇ ಉತ್ತರ ಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಅಷ್ಟೆ ಉತ್ತರ ಕೊಡುತ್ತಾರೆ. ಈಗ ಉತ್ತರ ಕೊಟ್ಟರೂ ಕೊಡಬಹುದು. ಇಲ್ಲದಿದ್ದರೆ ನಾಳೆ ಕೊಡಬಹುದು.

ಶ್ರೀ ಸಿದ್ದರಾಮಯ್ಯ : ನಾಳೆ ಅಥವಾ ಆಮೇಲೆ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದೇನು ಹೊಸ ತರಹ ಅಧ್ಯಕ್ಷರೆ?

ಶ್ರೀ ಸಿದ್ದರಾಮಯ್ಯ : ಇದು ಹೊಸದೇನೂ ಅಲ್ಲ. ಬಾಲಕೃಷ್ಣ ಒಂದು ನಿಮಿಷ ಕುಳಿತುಕೊಳ್ಳಪ್ಪ. ನೀವು Senior member ಅಲ್ಲವೇ, ಈಗ 4ನೇ ಬಾರಿ ಆಯ್ಕೆಯಾಗಿ ಬಂದಿರುವುದು, ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಎನ್ನುವುದು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ, ಬಹಳ ಪ್ರಮುಖವಾದ ವಿಚಾರಗಳು, ಬಹಳ urgency ಇರುವಂಥ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ. ಅದನ್ನು ಪ್ರಸ್ತಾಪ ಮಾಡಿದಾಗ ಸರ್ಕಾರ ಈಗಲೇ ಉತ್ತರ ಕೊಡಬೇಕೆಂದು ಇಲ್ಲ. ಸರ್ಕಾರದ ಗಮನವನ್ನು ಸೆಳೆದಿರುತ್ತಾರೆ,

ಕೂಡಲೇ ಕೊಡಬಹುದು, ಆಮೇಲೆ ನಂತರವೂ ಕೂಡಾ ಕೊಡಬಹುದು. ಅದರಿಂದ ನಾವು ಮಾಹಿತಿ ತರಿಸಿ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಹೋಗಲಿ, ನಮಗೆ ಉತ್ತರ ಯಾವಾಗ ಕೊಡಿಸುತ್ತೀರಿ ಹೇಳಿ.

ಅಧ್ಯಕ್ಷರು : ಸಾಧ್ಯವಾದರೆ, ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಸಾಧ್ಯವಾದರೆ ಅಂದರೆ, ನಾಳೆಯೇ ಕೊನೆಯ ದಿನ ಅಧ್ಯಕ್ಷರೆ.

ಅಧ್ಯಕ್ಷರು : ಆಯಿತು, ಕೊಡಿಸುತ್ತೇನೆ. ಶ್ರೀಮಾನ್ ಬಣಕಾರ್.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ನಾನಿದ್ದೇನೆ ಸಾರ್.

ಅಧ್ಯಕ್ಷರು : ನಿಮ್ಮ ಸರದಿ ಹೋಗಿ ಆಯಿತು. ಬಣಕಾರ್‌ರವರೇ ಸಂಕ್ಷಿಪ್ತವಾಗಿ ಹೇಳಿ.

2. ವಿಷಯ :– ಹಿರೇಕೆರೂರಿನಲ್ಲಿ ಕಳೆದ 15 ದಿವಸಗಳಿಂದ ಡೆಂಗ್ಯೂ ಜ್ವರ ವ್ಯಾಪಕವಾಗಿ ಹಬ್ಬಿರುವ ಬಗ್ಗೆ.

ಶ್ರೀ ಯು.ಬಿ.ಬಣಕಾರ್ : ಸನ್ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಹಿರೇಕೆರೂರು ತಾಲ್ಲೂಕಿನಲ್ಲಿ ಕಳೆದ 15 ದಿವಸಗಳಿಂದ ಡೆಂಗ್ಯೂ ಜ್ವರ ವ್ಯಾಪಕವಾಗಿ ಹಬ್ಬಿದೆ. ಆರೋಗ್ಯ ಸಚಿವರು ಇಲ್ಲಿಯವರೆಗೂ ಇಲ್ಲೇ ಇದ್ದರು, ಈಗ ಎದ್ದು ಹೋದರು. ಇದರ ಪರಿಣಾಮವಾಗಿ 4 ಜನ ಮೃತ ಪಟ್ಟಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಾನವೀಯ ಕಾಳಜಿಯನ್ನು ತೋರಿಸಿ ಮೈಸೂರಿನಲ್ಲಿ ಡೆಂಗ್ಯೂ ಜ್ವರಕ್ಕೆ ಬಲಿಯಾದವರಿಗೆ 1 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ. ಅದು ರಾಜ್ಯ ವ್ಯಾಪಿ ಕೊಡಬೇಕು ಹಾಗೂ ಚಿಕಿತ್ಸೆಗೆ ಬಡವರಿಗೆ ಹಣ ಇಲ್ಲ. ಆ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯವರ ಜೊತೆ ಮಾತನಾಡಿ..

ಅಧ್ಯಕ್ಷರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಬಂದೇ ಬಿಟ್ಟರು. ಉತ್ತರ ಹೇಳುತ್ತೀರಾ, ಹೇಳಿ.